

ತುದಿಯಿಲ್ಲದೆ ಮೊದಲಿಲ್ಲದೆ
ಹಿಡಿದಂಬರವನು ತಬ್ಬಿದೆ।
ಕಾದಂಬಿನಿ ರಾಶಿ;
ನಿರ್ದಯ ಕರಿಣಾಘಾತದಿ
ಕುಂಭಿನಿಯನು ಅಪ್ಪಳಿಸಿದೆ
ಘೀಳಿಟ್ಟುರೆ ಭೋರೆನ್ನುತೆ
ಬಿರುಗಾಳಿಯು ಬೀಸಿ

-ಕುವೆಂಪು

ಪ್ರವಾಸ ಸಾರ್ಥಕವಾದಂತೆಯೇ. ಬರೀ ವಿಡಿಯೊ ಮಾಡುವುದಕ್ಕೋಸ್ಕರವೇ ಪ್ರವಾಸ ಮಾಡುವ ಖಯಾಲಿಯವರು ಜಾಸ್ತಿಯಾಗಿದ್ದಾರೆ. ಇವರಿಗೆ ಪ್ರವಾಸ ತಮ್ಮೊಳಗೆ ಕೊಡುವ ವಾಸ್ತವವಾದ ಖುಷಿಗಿಂತಲೂ ವಿಡಿಯೊಗಳಲ್ಲಿ ಪ್ರವಾಸ ತಾಣಗಳನ್ನು ಚುಂಬಕವಾಗಿ ತೋರಿಸುವುದೇ ನಿಜವಾದ ಖುಷಿ. ಆದರೆ ಕೆಲವರಿಗೆ ಹಾಗಲ್ಲ, ಮಳೆ ಪ್ರವಾಸವೆಂದರೆ ಬದುಕಿನ ಧ್ಯಾನ.

ಮಳೆಯ ಸಂಗೀತವನ್ನು ಕೇಳುತ್ತ, ಶಾಂತತೆ ತುಂಬಿಕೊಂಡಿರುವ ತಾಣವೊಂದರಲ್ಲಿ ಒಂದಷ್ಟು ಹೊತ್ತು ಮೌನವಾಗಿ ಕೂತು, ಪ್ರಕೃತಿಯನ್ನೂ, ಪ್ರವಾಸಿತಾಣಗಳು ಮಾತ್ರ ಕೊಡುವ ಯಾವುದೋ ಒಂದು ದೈವಿಕ ಸುಖವನ್ನು ಅನುಭವಿಸುತ್ತ, ಒಂದಷ್ಟು ಹೊತ್ತು ಇಂತಹ ತಾಣಗಳಲ್ಲಿ ಕೂತು ರಿಲ್ಯಾಕ್ಸ್ ಆಗುತ್ತ ತಮ್ಮನ್ನು ತಾವು ಇವರು ಕಂಡುಕೊಳ್ಳುತ್ತಾರೆ.

ಗಿಜಿ ಗಿಜಿ ಇರುವೆಗಳಂತೆಯೇ ಪ್ರವಾಸಿಗರು ತುಂಬಿಕೊಂಡಿರುವ ತಾಣಗಳನ್ನು ಆಯ್ದುಕೊಳ್ಳದೆ, ಜನ ಕಡಿಮೆ ಇರುವ ಶಾಂತ ಪರಿಸರದಲ್ಲಿ ಒಂದಷ್ಟು ಹೊತ್ತು ಕಳೆದರೇನೆ ಇವರಿಗೆ ಹಿಗ್ಗು. ಕೆಲವರಿಗೆ ಮಳೆ ಪ್ರವಾಸ ಅಂದರೆ ಕ್ಷಣಿಕ ಖುಷಿ, ಕೆಲವರಿಗೆ ಮಳೆ ಪ್ರವಾಸದಲ್ಲಿ ತಮ್ಮನ್ನೇ ತಾವು ಕಂಡುಕೊಳ್ಳುವ ಸಡಗರ, ಬದುಕಿನ ದಾರಿಯಲ್ಲಿ ಹೊಸತೇನನ್ನೋ ಹುಡುಕುವ, ಕೌತುಕವಾಗುವ ಹಂಬಲ. ಮಳೆ ಪ್ರವಾಸವನ್ನು ಸುಖಿಸುವ ಪರಿ ಒಬ್ಬೊಬ್ಬರದು ಒಂದೊಂದು ರೀತಿ; ಅವರಿಗೆಲ್ಲಾ ಸಿಗುವ ಆನಂದ, ಸಾರ್ಥಕತೆಯೂ ವಿಭಿನ್ನ.

## ಮಾನಸಿಕ ಆರೋಗ್ಯಕ್ಕೆ ಮಳೆ ಪ್ರವಾಸ

"ಯಾವಾಗ ನೋಡಿದ್ರೂ ಮನೇಲೆ ಕೂತು ವರ್ಕ್ ಫ್ರಂ ಹೋಂ ಮಾಡಿ ತಲೆಬಿಸಿಯಾಗಿ ಹೋಗಿದೆ. ಪ್ರತೀ ದಿನ ಕೆಲಸದ ಒತ್ತಡ ಜಾಸ್ತಿಯಾಗುತ್ತಿದೆ ಬಿಟ್ಟರೆ ಕಡಿಮೆಯಾಗಲ್ಲ. ಕೆಲವೊಮ್ಮೆ ಇವನ್ನೆಲ್ಲಾ ನಿಭಾಯಿಸೋಕೆ ನನ್ನಲ್ಲೊಂದು ನನ್ನಿಷ್ಟದ ಜಗತ್ತೇ ಇಲ್ಲ ಅನ್ನಿಸ್ತದೆ ಮಾರಾಯ" ಎಂದು ಐಟಿ ಕ್ಷೇತ್ರದ ಗೆಳೆಯನೊಬ್ಬ ಆಗಾಗ ಬೇಸರ ತೋಡಿಕೊಳ್ಳುತ್ತಲೇ ಇದ್ದ. ''ನಿಮ್ಮೂರು ಮಲೆನಾಡು, ಈಗ ಮಳೆ ಬರುವ ಸಮಯ ಬೇರೆ. ಮಳೆಗೆ ನಿಮ್ಮೂರಲ್ಲಿ ಹೆಜ್ಜೆ ಹೆಜ್ಜೆಗೂ ಸ್ವರ್ಗವೇ. ಸ್ವಲ್ಪ ಸುತ್ತಾಡಿ ಬರಬಾರದಾ'' ಎಂದು ಹೇಳಿ ಸುಮ್ಮನಾದೆ. ಮತ್ತೊಮ್ಮೆ ಅವನು ಸಿಕ್ಕಾಗ ''ನಿಜ ಮಾರಾಯ, ಮಳೆಗೆ ಒಂದೊಂದು ದಾರಿಯೂ ಸ್ವರ್ಗ. ಮಳೆಯಲ್ಲಿ ತಿರುಗಾಡ್ತಾ

